ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ದಿನಾಂಕ 20.4.98ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಹದಿನಾಲ್ಕನೇ ಪಟ್ಟಿಯಲ್ಲಿನ ಒಟ್ಟು 85 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆ ಡಾಂಬರೀಕರಣ

769 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ 1996-97, 1997-98ನೇ ಸಾಲಿನಲ್ಲಿ ಯಾವ ಯಾವ ರಸ್ತೆಯಲ್ಲಿ ಮರು ಡಾಂಬರೀಕರಣಕ್ಕಾಗಿ ಟೆಂಡರು ಕರೆಯಲಾಗಿದೆ. ಟೆಂಡರ್ ಕರೆಯಲಾದ ಡಾಂಬರೀಕರಣಕ್ಕೆ ಒದಗಿಸಬೇಕಾದ ಡಾಂಬರು ಎಷ್ಟು? (ಕಿ.ಮೀ.ವಾರು ವಿವರ ಒದಗಿಸುವುದು)*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 1996-97ನೇ ಸಾಲಿನಲ್ಲಿ ಯಾವ ಕಾಮಗಾರಿಯು ಮಂಜೂರಾತಿ ಗೊಂಡಿರುವುದಿಲ್ಲ ಹಾಗೂ ಗುತ್ತಿಗೆ ಕರೆದಿರುವುದಿಲ್ಲ.

1997-98ನೇ ಸಾಲಿನಲ್ಲಿ ಮೈಸೂರು ಬಂಟ್ವಾಳ ರಸ್ತೆಯಲ್ಲಿ ಮರು ಡಾಂಬರೀಕರಣಕ್ಕಾಗಿ ಒಟ್ಟು 9 ಕಾಮಗಾರಿಗಳಿಗಾಗಿ ಟೆಂಡರು ಕರೆಯಲಾಗಿದೆ. ಸದರಿ ಕಾಮಗಾರಿಗಳಿಗೆ ಒಟ್ಟು 144.82 ಟನ್ ಡಾಂಬರು ಬೇಕಾಗಿರುತ್ತದೆ.

ವಿವರಗಳು ಕೆಳಕಂಡಂತಿದೆ :

1997-98	ಅಂದಾಜು ಮೊತ್ತ ರೂ. (ಲಕ್ಷ ರೂ.ಗಳಲ್ಲಿ)	ಬೇಕಾಗುವ ಡಾಂಬರು
1. ಸುಳ್ಯ ತಾಲ್ಲೂಕು ಮೈಸೂರು ಬಂಟ್ವಾಳ ರಸ್ತೆ ಕಿಮೀ 177.20 ಕಿ.ಮೀ.ನಲ್ಲಿ ಮಳಾನಿಯಾದ ರಸ್ತೆ ಮೇಲ್ಪೈಗೆ ಮರು ಡಾಂಬರೀಕರಣ	3.00	15.31 ಟನ್
2. ಸುಳ್ಯ ತಾಲೂಕಿನ ಮೈಸೂರು ಬಂಟ್ವಾಳ ರಸ್ತೆಯ ಕಿಮೀ.154.00ರಿಂದ 155.00 ರವರೆಗೆ -ಅದೇ-	3.00	15.04 ಟನ್
3. -ಅದೇ-ರಸ್ತೆಯ 158.00 ರಿಂದ 159.00 ಕಿ.ಮೀ.ವರೆಗೆ -ಅದೇ-	3.00	15.12 ಟನ್

1	2	3
4. -ಅದೇ-ರಸ್ತೆಯ 169.00 ರಿಂದ 170.00 ವರೆಗೆ -ಅದೇ-	3.00	15.68 ಟನ್
5. -ಅದೇ-ರಸ್ತೆಯ 168.00 ರಿಂದ 169.00 -ಅದೇ-	3.00	15.71 ಟನ್
6. -ಅದೇ-ರಸ್ತೆಯ 150.00 ರಿಂದ 151.00 -ಅದೇ-	3.00	14.55 ಟನ್
7. -ಅದೇ-ರಸ್ತೆಯ 157.00 ರಿಂದ 158.00 ರವರೆಗೆ -ಅದೇ-	4.00	17.92 ಟನ್
8. -ಅದೇ-ರಸ್ತೆಯ 148.50 ರಿಂದ 149.50 ರವರೆಗೆ -ಅದೇ-	4.00	17.63 ಟನ್
9. -ಅದೇ- ರಸ್ತೆಯ 153.00 ರಿಂದ 154.00 ರವರೆಗೆ -ಅದೇ-	4.00	17.86 ಟನ್
ಒಟ್ಟು	**30.00**	**144.82 ಟನ್**

ಬಾಲ ಕಾರ್ಮಿಕರ ಸಮೀಕ್ಷೆ ಕಾರ್ಯ

771 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ರಾಜ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಳ್ಳಾರಿ ಜಿಲ್ಲೆಯಲ್ಲಿರುವ ಬಾಲ ಕಾರ್ಮಿಕರ ಸಮೀಕ್ಷೆ ಕಾರ್ಯವನ್ನು ಸರ್ಕಾರದವರು ಕೈಗೊಂಡಿದ್ದಾರೆಯೇ?*

ಆ) *ಹಾಗಿದ್ದಲ್ಲಿ ಈ ಸಮೀಕ್ಷೆ ಕಾರ್ಯವನ್ನು ಯಾವಾಗ ಕೈಗೊಳ್ಳಲಾಯಿತು?*

ಇ) *ಎಷ್ಟು ಬಾಲ ಕಾರ್ಮಿಕರನ್ನು ಈ ಜಿಲ್ಲೆಯಲ್ಲಿ ಗುರುತಿಸಲಾಗಿದೆ?*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ಹೌದು.

ಆ) ದಿ. 15.4.97 ರಿಂದ 15.5.97ರ ವರೆಗೆ ಕೈಗೊಳ್ಳಲಾಯಿತು.

ಇ)

ಅಪಾಯಕಾರಿ ಉದ್ದಿಮೆಗಳಲ್ಲಿ	3801
ಅಪಾಯಕಾರಿ ಅಲ್ಲದ ಉದ್ದಿಮೆಗಳಲ್ಲಿ	4396
ಒಟ್ಟು	**8197**

ಕೇಂದ್ರ ಸ್ವಾಮ್ಯದ ಎಂ.ಎಂ.ಟಿ.ಸಿ. ಯಿಂದ ರಸ್ತೆ ಅಭಿವೃದ್ಧಿ ಹಣ

772 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಳ್ಳಾರಿ ಜಿಲ್ಲೆಯಲ್ಲಿರುವ ಕೇಂದ್ರ ಸ್ವಾಮ್ಯದ ಎಂ.ಎಂ.ಟಿ.ಸಿ.ಯಿಂದ ರಾಜ್ಯದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?*